ದಿನಾಂಕಃ **19.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ

01. ನನಗೆ ಮೃತ 1 ನೇ ಪ್ರತಿವಾದಿ ಪಾಟೀಲ್ ನೀಲಮ್ಮ ಮತ್ತು ಆಕೆಯ ಗಂಡ ಮೃತ ಪಾಟೀಲ್ ಕೊಟ್ರಗೌಡ ಪರಿಚಯವಿದ್ದರು. ಅವರಿಗೆ ಬಸವನಗೌಡ, ರಾಮನಗೌಡ, ಮಂಜುನಾಥಗೌಡ, ಮಂಜುಳಾ, ಸಿದ್ಧನಗೌಡ, ಚೆನ್ನಬಸವನಗೌಡ ಮತ್ತು ತಾಯವ್ವ @ ನಂದಿನಿ ಎಂಬ ಮಕ್ಕಳಿದ್ದರು ಎಂದರೆ ಸರಿ. ಸದರಿ ಮಕ್ಕಳ ಪೈಕಿ 5 ಮತ್ತು 8 ನೇ ಪ್ರತಿವಾದಿ ಮಂಜುಳಾ ಹಾಗೂ ತಾಯವ್ವನನ್ನು ಬಿಟ್ಟು ಉಳಿದವರು ಮೃತಪಟ್ಟಿದ್ದಾರೆ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಗಳು ಬಸವನಗೌಡ ಇವರ ಹೆಂಡತಿ ಮತ್ತು ಮಕ್ಕಳು ಎಂದರೆ ನನಗೆ ಉಮಾ ಪಾಟೀಲ್ ಗೊತ್ತು, ಅವರ ಮಕ್ಕಳ ಬಗ್ಗೆ ಮಾಹಿತಿ ಇಲ್ಲ. ರಾಮನಗೌಡ ಮಕ್ಕಳಿಲ್ಲದೇ ಮೃತಪಟ್ಟರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ವಾದಿ ಮತ್ತು ಸವಿತಾ ಎನ್ನುವವರು ಮಂಜುನಾಥಗೌಡ ರವರ ಮಕ್ಕಳು ಎಂದರೆ ಹೌದು, ಸವಿತಾ ಮೃತಪಟ್ಟಿದ್ದಾರೆ. ಸಾಕ್ಷಿಯವರು ವಾದಿ ಹಿರೇಮಲ್ಲನಕೆರೆಯಲ್ಲಿ ವಾಸ ಮಾಡುವುದಿಲ್ಲ ಎಂದು ಹೇಳಿದ್ದಾರೆ. ವಾದಿ ಎಲ್ಲಿ ವಾಸ ಮಾಡುತ್ತಾರೆ? ಎಂದರೆ ನನಗೆ ಕೇಳಿ ಬಂದ ಪ್ರಕಾರ ಅವರು ಬೆಂಗಳೂರಿನಲ್ಲಿ ವಾಸ ಮಾಡುತ್ತಾರೆ. ವಾದಿಯ ತಂದೆ ಮಂಜುನಾಥಗೌಡ ದಿನಾಂಕ 09.11.1998 ರಂದು ಮೃತಪಟ್ಟರು ಎಂದರೆ ಸರಿ. ವಾದಿಯ ತಾಯಿ ಸಾವಿತ್ರಮ್ಮ ದಿನಾಂಕ 24.02.2004 ರಂದು ಮೃತಪಟ್ಟರು ಎಂದರೆ ಸರಿ. ವಾದಿ ಚಿಕ್ಕ ವಯಸ್ಸಿನವನಿದ್ದಾಗಲೇ ಆತನ ತಂದೆ-ತಾಯಿ ಮೃತಪಟ್ಟರು ಎಂದರೆ ಇರಬಹುದು. ವಾದಿಯ ಅಜ್ಜಿ ನೀಲಮ್ಮ ಯಾವತ್ತೂ ವಾದಿಯ ಪಾಲನೆ-ಪೋಷಣೆ ಮಾಡಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಂಗನಗೌಡ ಮತ್ತು ಆತನ ಹೆಂಡತಿ ನಿರ್ಮಲಾ ಕೂಡಾ ಸಂತಾನವಿಲ್ಲದೇ ಮೃತಪಟ್ಟಿದ್ದಾರೆ ಎಂದರೆ ಅವರು ಮೃತಪಟ್ಟಿದ್ದಾರೆ ಆದರೆ ಅವರಿಗೆ ಸಂತಾನ ಇತ್ತೋ ಇಲ್ಲೋ ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿ ಲತಾ ರವರು ಈ ದಾವೆ ನಡೆಯುತ್ತಿರುವಾಗ ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಚೆನ್ನಬಸವನಗೌಡ ಮತ್ತು 6 ನೇ ಪ್ರತಿವಾದಿಯ ಮಗನಾದ 7 ನೇ ಪ್ರತಿವಾದಿ ಒಬ್ಬನೇ ಅವರಿಗೆ ವಾರಸುದಾರನಾಗಿದ್ದು, 7 ನೇ ಪ್ರತಿವಾದಿ ಇನ್ನೂ ಅಪ್ರಾಪ್ತ ವಯಸ್ಕನಾಗಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಅದೇ ಗ್ರಾಮದಲ್ಲಿ ವಾಸ ಮಾಡುತ್ತಿರುವುದರಿಂದ ಈ ಎಲ್ಲಾ ಸಂಗತಿಗಳು ನನಗೆ ಗೊತ್ತಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

02. ದಾವಾ ಸ್ವತ್ತುಗಳು ಮೂಲತಃ ಪಾಟೀಲ್ ಕೊಟ್ರಗೌಡನ ತಂದೆ ಚೆನ್ನಬಸವನಗೌಡ ಇವರಿಗೆ ಸೇರಿದ್ದವು ಎಂದರೆ ನಾನು ಪಹಣಿಯಲ್ಲಿ ಹೆಸರು ನೋಡಿ ಖರೀದಿ ಮಾಡಿದ್ದೇನೆ. ಪಹಣಿಗಳ ಪ್ರಕಾರ ಪಾಲುವಿಭಾಗದಲ್ಲಿ ಆಸ್ತಿ ಪಡೆದವರಿಂದ ನಾನು ಖರೀದಿ ಮಾಡಿರುತ್ತೇನೆ. ಚೆನ್ನಬಸವನಗೌಡ ಇವರಿಗೆ ಪಾಟೀಲ್ ಕೊಟ್ರಗೌಡ ಒಬ್ಬನೇ ಮಗನಾಗಿದ್ದ ಎಂದರೆ ಪಾಟೀಲ್ ಕೊಟ್ರಗೌಡನಿಗೆ ಅಕ್ಕ-ತಂಗಿಯರು ಇದ್ದರು. ನನ್ನ ಪ್ರತಿವಾದ ಪತ್ರದಲ್ಲಿ ಪಾಟೀಲ್ ಕೊಟ್ರಗೌಡನಿಗೆ ಅಕ್ಕತಂಗಿಯರು ಇದ್ದರೆಂದು ನಾನು ಬರೆಯಿಸಿಲ್ಲ. ನಿಡಿ58 ರ ಪಾಲುವಿಭಾಗ ಆದಾಗ ನಾನೂ ಕೂಡಾ ಅದರಲ್ಲಿ ಭಾಗವಹಿಸಿದ್ದುಂಟೇ? ಎಂದರೆ ಭಾಗವಹಿಸಿರಲಿಲ್ಲ. ನಿಡಿ58 ರ ಪಾಲುವಿಭಾಗ ಯಾರ ಯಾರ ನಡುವೆ ನಡೆದಿತ್ತು? ಎಂದರೆ ನೀಲಮ್ಮ ಮತ್ತು ಆಕೆಯ 6 ಜನ ಮಕ್ಕಳ ನಡುವೆ ನಡೆದಿರುತ್ತದೆ. ನಾನು ನಿಡಿ58 ರ ಪ್ರತಿಯನ್ನು ತಹಶೀಲ್ದಾರರ ಕಚೇರಿಯಿಂದ ತಂದಿದ್ದೆ. ನನಗೆ ನಿಡಿ58 ರ ಅಸಲಿ ಪ್ರತಿ ಎಲ್ಲಿದೆ ಎಂದು ಗೊತ್ತಿಲ್ಲ. ನಾನು ಬಿ.ಎ. ಪದವೀಧರನಿರುತ್ತೇನೆ. ನಿಡಿ58 ರಲ್ಲಿ ಜೆರಾಕ್ಸ್ ಕಾಪಿ ಅಟೆಸ್ಟೆಡ್ ಎಂದು ದೃಢೀಕರಣ ಮಾಡಿದ್ದಾರೆ ಎಂದರೆ ಸರಿ. ನಿಡಿ58 ನ್ನು ತಾಲ್ಲೂಕು ಕಚೇರಿಯ ಶಿರಸ್ತೇದಾರ್

ನೀಡಿದ್ದಾರೆ ಎಂದರೆ ಸರಿ. ಮೂಲ ದಾಖಲೆಯನ್ನು ಪರಿಶೀಲನೆ ಮಾಡಿ ಅಟೆಸ್ಟ್ ಮಾಡುತ್ತಾರೆ ಎಂದರೆ ಸರಿ. ಆದ್ದರಿಂದ ಜೆರಾಕ್ಸ್ ಕಾಪಿ ನೋಡಿ ಅಟೆಸ್ಟ್ ಮಾಡಿಕೊಡಲು ಶಿರಸ್ತೇದಾರರಿಗೆ ಅಧಿಕಾರವಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಮೃತ 1 ನೇ ಪ್ರತಿವಾದಿ, 9 ನೇ ಪ್ರತಿವಾದಿ ಮತ್ತು ನಾನು ಶಾಮೀಲಾಗಿ ನಿಡಿ58 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ58 ರಲ್ಲಿ ಸ್ಟಾಂಪ್ ಪೇಪರ್ ಯಾರು ಖರೀದಿ ಮಾಡಿದರು, ಯಾರ ಹೆಸರಿನಲ್ಲಿ ಖರೀದಿ ಮಾಡಿದರು ಎಂಬ ಬಗ್ಗೆ ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ, ತಾಲ್ಲೂಕು ಆಫೀಸಿನಲ್ಲಿ ಕೊಟ್ಟಿದ್ದರಿಂದ ತಂದು ಹಾಜರು ಮಾಡಿದ್ದೇನೆ. ವಾದಿ ಆಗ ಅಲ್ಪವಯಿ ಆಗಿದ್ದ ಬಗ್ಗೆ ನಿಡಿ58 ರಲ್ಲಿ ಎಲ್ಲಿಯೂ ಉಲ್ಲೇಖವಾಗಿಲ್ಲ ಎಂದರೆ ವಾದಿಯ ತಾಯಿಯ ಹೆಸರು ಇರುತ್ತದೆ. ವಾದಿಗೆ ಹಿಸ್ಸೆ ನೀಡಬಾರದು ಎಂಬ ಉದ್ದೇಶದಿಂದ ಈ ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

***(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
**ಹೂವಿನ ಹಡಗಲಿ.**